**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ ಹೊಳಲ್ಕೆರೆ.**

**ಸಿ.ಸಿ. 521/2023**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಪಾಂಡುರಂಗಪ್ಪ | ಪ್ರಾ.ಸಾಃ 1 |
| ತಂದೆಯ/ಗಂಡನ ಹೆಸರು | : | ನಾಗಪ್ಪ | ಚಾ.ಸಾಃ 1 |
| ವಯಸ್ಸು | : | 60 ವರ್ಷ | |
| ಕೆಲಸ | : | ವ್ಯವಸಾಯ | ಸಾ ಪ್ರ ಬೋ |
| ವಾಸ | : | ಗೊಲ್ಲರಹಳ್ಳಿ ಗ್ರಾಮ | ದಿಃ19.02.2026 |

**ಮುಖ್ಯ ವಿಚಾರಣೆ ಎ.ಪಿ.ಪಿ.ಯವರಿಂದಃ**

ಚಾಸಾ.4 ನನ್ನ ಅಣ್ಣನ ಮಗ. ಚಾಸಾ.5 ಮತ್ತು 6 ಗೊತ್ತು. ನ್ಯಾಯಾಲಯದ ಮುಂದಿರುವ ಆರೋಪಿತರು ಗೊತ್ತು. ಗೈರು ಹಾಜರಾಗಿರುವ 1 ನೇ ಆರೋಪಿ ಗೊತ್ತು.

2. ಸುಮಾರು 2 ವರ್ಷಗಳ ಹಿಂದೆ ಸಂಜೆ 5 ರಿಂದ 6 ಗಂಟೆ ಸಮಯದಲ್ಲಿ ನಮಗೆ ಸೇರಿದ ಜಮೀನು ಸ.ನಂ.19/8 ರಲ್ಲಿ ನಾನು ಮತ್ತು ಚಾಸಾ.4 ರವರು ಇರುವಾಗ ನ್ಯಾಯಾಲಯದ ಮುಂದಿರುವ ಆರೋಪಿತರು ಗುಂಪು ಕಟ್ಟಿಕೊಂಡು ಬಂದು ನಮ್ಮ ಮೇಲೆ ಗಲಾಟೆ ಮಾಡಿ, 3 ನೇ ಆರೋಪಿ ಎಡೆಮಟ್ಟೆಯಿಂದ ನನ್ನ ಮುಖಕ್ಕೆ ಹಾಗೂ ಮೈಕೈಗೆ ಹೊಡೆದಿರುತ್ತಾರೆ. ನನ್ನ ಮಗನಾದ ಚಾಸಾ.4 ರವರಿಗೂ ಸಹ ಎಲ್ಲಾ ಆರೋಪಿತರು ಕೈ ಮತ್ತು ಕಾಲುಗಳಿಂದ ಮೈಕೈಗೆ ಹೊಡೆದು ನನಗೆ ಮತ್ತು ಚಾಸಾ.4 ರವರಿಗೆ ಕೊಲೆ ಬೆದರಿಕೆ ಹಾಕಿರುತ್ತಾರೆ. ಆರೋಪಿತರು ಹಲ್ಲೆ ಮಾಡಿದ ಪರಿಣಾಮ ನಾನು ಮತ್ತು ನನ್ನಮಗ ಬಿದ್ದಿದ್ದೆನು. ಗಲಾಟೆಯ ಸಮಯದಲ್ಲಿ ಊರಿನ ಜನ ಇದ್ದರು. ಗಲಾಟೆಯ ನಂತರ ನಾನು ಮತ್ತು ಚಾಸಾ.4 ರವರು ಹೊಳಲ್ಕೆರೆಯ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಾವು ಆಸ್ಪತ್ರೆಯಲ್ಲಿದ್ದಾಗ ಪೊಲಿಸರು ನನ್ನಿಂದ ಹೇಳಿಕೆಯ ದೂರನ್ನು ಪಡೆದುಕೊಂಡಿರುತ್ತಾರೆ. ಸಾಕ್ಷಿ ದೂರಿನಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು, ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು. ಆರೋಪಿತರು ಹಲ್ಲೆ ಮಾಡಲು ಉಪಯೋಗಿಸಿದ ನ್ಯಾಯಾಲಯದ ಮುಂದಿರುವ ಎಡೆಮಟ್ಟೆಯನ್ನು ನೋಡಿ ಗುರುತಿಸಿದ್ದು, ಮು.ಮಾ.1 ಎಂದು ಗುರುತಿಸಲಾಯಿತು. ಹಲ್ಲೆ ಮಾಡಿದ ನ್ಯಾಯಾಲಯದ ಮುಂದಿರುವ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯಕ್ಕೆ ಗೈರು ಹಾಜರಾಗಿರುವ 1 ನೇ ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಪೊಲೀಸರು ನನ್ನಿಂದ ಮರು ಹೇಳಿಕೆಯನ್ನು ಪಡೆದುಕೊಂಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಪಾಟೀ ಸವಾಲು ಎ.ಪಿ.ಪಿ.ಯವರಿಂದಃ**

3. ಆರೋಪಿತರು ದಿನಾಂಕ 07.08.2023 ರಂದು ಗಲಾಟೆ ಮಾಡಿರುತ್ತಾರೆ ಎಂದರೆ ಸರಿ. ಆರೋಪಿತರು ನನಗೆ ಮತ್ತು ಚಾಸಾ.4 ರವರಿಗೆ ಸೂಳೆ ಮಕ್ಕಳ, ಬೋಳಿಮಕ್ಕಳ ಎಂದು ಅವಾಚ್ಯ ಶಬ್ಧಗಳಿಂದ ಬೈದಿರುತ್ತಾರೆ ಎಂದರೆ ಸರಿ. ಚಾಸಾ.5 ಮತ್ತು 6 ರವರು ಗಲಾಟೆಯನ್ನು ಬಿಡಿಸಿರುತ್ತಾರೆ ಎಂದರೆ ಸರಿ. ಪೊಲೀಸರಿಗೆ ದಿನಾಂಕ 08.08.2023 ರಂದು ಮರು ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಸಿ.ಓ.ಎಂ. ವಕೀಲರಿಂದ**

4. ಗಲಾಟೆ ಸಂಜೆ 5 ರಿಂದ 6 ಗಂಟೆಯ ಸಮಯದಲ್ಲಿ ಆಗಿರುತ್ತದೆ. ಗಲಾಟೆಯ ಸಮಯದಲ್ಲಿ ತಹಶೀಲ್ದಾರ್‌ರವರು ಬಂದಿದ್ದರು ಎಂದು ದೂರಿನಲ್ಲಿ ಹೇಳಿರುತ್ತೇನೆ ಎಂದರೆ ಸರಿ. ತಹಶೀಲ್ದಾರ್ ರವರು ನಮ್ಮ ಜಮೀನಿನ ಬಳಿ ಬಂದು ದಾಖಲಾತಿಗಳನ್ನು ಕೇಳಿದ್ದರು. ಆಗ ನಾನು ತಹಶೀಲ್ದಾರ್‌ರವರಿಗೆ ಕ್ರಯಪತ್ರ, ಅಕಾರ್‌ಬಂದ್, ಮುಟೇಷನ್ ವಹಿ ಹಾಗೂ ಇತರೆ ಕಂದಾಯ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. ನಾನು ಪೊಲೀಸರಿಗೆ ತಹಶೀಲ್ದಾರ್‌ರವರಿಗೆ ದಾಖಲಾತಿಗಳನ್ನು ಕೊಟ್ಟಿರುವ ಬಗ್ಗೆ ಹೇಳಿರುತ್ತೇನೆ, ಆದರೆ ಪೊಲೀಸರು ದೂರಿನಲ್ಲಿ ಆ ರೀತಿ ಬರೆದುಕೊಂಡಿಲ್ಲ. ಪೊಲೀಸರ ವಿರುದ್ಧ ಮೇಲಾಧಿಕಾರಿಗೆ ಯಾವುದೇ ಮೇಲ್ಮನವಿಯನ್ನು ನೀಡಿಲ್ಲ. ತಹಶೀಲ್ದಾರ್‌ರವರು ನಮ್ಮ ಜಮೀನಿನ ಬಳಿ ಮದ್ಯಾಹ್ನ 3.30 ಗಂಟೆಗೆ ಬಂದಿದ್ದರು ಎಂದರೆ ಸರಿ. ಸದರಿ ಸಮಯದಲ್ಲಿ ಗಲಾಟೆ ಆಗಿರುತ್ತದೆ ಎಂದರೆ ಸರಿ. ಗಲಾಟೆಯ ಸಮಯದಲ್ಲಿ ತಹಶೀಲ್ದಾರ್‌ರವರು ಸ್ಥಳದಲ್ಲಿ ಇದ್ದರು ಎಂದರೆ ಸರಿ.

5. ನಮಗೆ ಸೇರಿದ ಸ.ನಂ.19/8 ರ ಜಮೀನು ಊರಿನ ಸ್ವಲ್ಪ ದೂರಿನಲ್ಲಿ ಇದೆ. ನಮ್ಮ ಜಮೀನಿನ ನಂತರ ಆರೋಪಿತರ ಜಮೀನುಗಳು ಇವೆ ಎಂದರೆ ಸರಿಯಲ್ಲ. 3 ನೇ ಆರೋಪಿತರ ಜಮೀನು ಮಾತ್ರ ಇದೆ. ನಮ್ಮ ಜಮೀನಿಗೆ ಹೊಂದಿಕೊಂಡಂತೆ ಆರೋಪಿತರ ಜಮೀನುಗಳಿಗೆ ಓಡಾಡಲು ದಾರಿ ಇದೆ ಎಂದರೆ ಸರಿಯಲ್ಲ. 3 ನೇ ಆರೋಪಿತರಿಗೆ

ಓಡಾಡಲು ನಾನು ಅಡ್ಡಿಪಡಿಸಿರುತ್ತೇನೆ ಎಂದರೆ ಸರಿಯಲ್ಲ. 3 ನೇ ಆರೋಪಿತರು ದಾರಿಯನ್ನು ಬಿಡಿಸಿಕೊಡುವಂತೆ ತಹಶೀಲ್ದಾರ್‌ರವರಿಗೆ ಅರ್ಜಿಯನ್ನು ಕೊಟ್ಟಿದ್ದರು ಎಂದರೆ ಸರಿ. ಆ ಬಗ್ಗೆ ತಹಶೀಲ್ದಾರ್‌ರವರು ಬಂದು ಒಮ್ಮೆ ಪರಿಶೀಲನೆ ಮಾಡಿಕೊಂಡು ಹೋಗಿದ್ದರು. ತಹಶೀಲ್ದಾರ್‌ರವರು ಪರಿಶೀಲನೆ ಮಾಡಿಕೊಂಡು ಹೋದ ನಂತರ ನಾನು ತಂತಿ ಬೇಲಿಯನ್ನು ನಿರ್ಮಿತಿ ಮಾಡಿ ವಿದ್ಯುತ್ ಪರಿವರ್ತಕವನ್ನು ಅಳವಡಿಸಿರುತ್ತೇನೆ ಎಂದರೆ ಸಾಕ್ಷಿ ಅದಕ್ಕಿಂದ ಮೊದಲೆ ಹಾಕಿದ್ದೆನು ಎಂದು ಹೇಳುತ್ತಾರೆ. ಆ ಬಗ್ಗೆ ಗ್ರಾಮಲೆಕ್ಕಿಗರು ಮತ್ತು ರಾಜಸ್ವ ನಿರೀಕ್ಷಕರು ಸ್ಥಳ ಪರಿಶೀಲನೆ ಮಾಡಿಕೊಂಡು ಹೋಗಿದ್ದರು ಎಂದರೆ ಸರಿ. ಆ ಕುರಿತು ತಹಶೀಲ್ದಾರ್‌ರವರು ಸ್ಥಳಕ್ಕೆ ಬಂದಿದ್ದರು ಎಂದರೆ ಸಾಕ್ಷಿ ವಿದ್ಯುತ್ ಸಂಪರ್ಕವನ್ನು ಅನಧಿಕೃತವಾಗಿ ಪಡೆದುಕೊಂಡಿದ್ದ ಬಗ್ಗೆ ಬಂದಿದ್ದು, ನಾನು ದಾಖಲಾತಿಗಳನ್ನು ನೀಡಿದ್ದೆನು ಎಂದು ಹೇಳುತ್ತಾರೆ. ತಹಶೀಲ್ದಾರ್‌ರವರು ಆರೋಪಿತರಿಗೂ ಸಹ ಮಾಹಿತಿಯನ್ನು ನೀಡಿದ್ದರಿಂದ, ಸ್ಥಳಕ್ಕೆ ಬಂದಿದ್ದರು ಎಂದರೆ ಸಾಕ್ಷಿ ತಹಶೀಲ್ದಾರ್‌ರವರು ನನಗೆ ಸ್ಥಳ ಪರಿಶೀಲನೆ ಮಾಡುವ ಬಗ್ಗೆ ಯಾವುದೇ ನೋಟೀಸನ್ನು ನೀಡಿರಲಿಲ್ಲ ಎಂದು ಹೇಳುತ್ತಾರೆ. ಆರೋಪಿತರಿಗೆ ಗಲಾಟೆ ಮಾಡುವ ಉದ್ದೇಶ ಇರಲಿಲ್ಲ ಎಂದರೆ ಸರಿಯಲ್ಲ.

6. ಜಮೀನಿನ ವಿಚಾರದ ಕುರಿತು 1 ನೇ ಆರೋಪಿ ಮತ್ತು ನಮ್ಮ ಕುಟುಂಬಕ್ಕೆ ನಡೆಯುತ್ತಿದ್ದ ಗಲಾಟೆಯ ಕುರಿತು ಪಂಚಾಯಿತಿ ಮಾಡಿರುವುದಿಲ್ಲ ಎಂದು ದೂರಿನಲ್ಲಿ ಹೇಳಿರುತ್ತೇನೆ ಎಂದರೆ ಸರಿ. ನಂತರ ಸಾಕ್ಷಿ ಪಂಚಾಯಿತಿ ಮಾಡುವ ಬಗ್ಗೆ ದೂರಿನಲ್ಲಿ ಬರೆಸಿಲ್ಲ ಎಂದು ಹೇಳುತ್ತಾರೆ. ಪಂಚಾಯಿತಿ ಮಾಡದ ಕಾರಣ ಆರೋಪಿತರ ಕುರಿತು ನನಗೆ ದ್ವೇಷ ಇತ್ತು ಎಂದರೆ ಸರಿಯಲ್ಲ. ತಹಶೀಲ್ದಾರ್‌ರವರು ಸ್ಥಳ ಪರಿಶೀಲನೆ ಮಾಡಿದ ನಂತರ ನಾನು ರಸ್ತೆಯನ್ನು ಬಿಟ್ಟುಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ತಹಶೀಲ್ದಾರ್‌ರವರು ಸ್ಥಳ ಪರಿಶೀಲನೆ ಮಾಡಲು ಬಂದಾಗ ನಾನು ಆರೋಪಿತರ ಮೇಲೆ ಗಲಾಟೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಗಲಾಟೆ ಮಾಡಿದ್ದ ಕುರಿತು ಆರೋಪಿತರು ಆಸ್ಪತ್ರೆಗೆ ದಾಖಲಾತಿ ಸಂಜೆ 5 ರಿಂದ 6 ಗಂಟೆಯ ಸಮಯದಲ್ಲಿ ಪೊಲೀಸರಿಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ವಿರುದ್ಧ ದೂರನ್ನು ನೀಡಿರುವ ವಿಚಾರ ತಿಳಿದ ನಂತರ ನಾನು ಆರೋಪಿತರ ವಿರುದ್ಧ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

7. 5 ನೇ ಆರೋಪಿ ಗೊತ್ತು. 5 ನೇ ಆರೋಪಿ ಶಿಕ್ಷಕನಾಗಿ ಕೆಲಸ ಮಾಡುತ್ತಿದ್ದಾರೆ. 5 ನೇ ಆರೋಪಿ ನಮ್ಮ ಗ್ರಾಮದವರು ಎಂದರೆ ಸರಿ. ಶಿಕ್ಷಕರ ಹೆಸರು ಲೋಕೇಶಪ್ಪ ಎಂದರೆ ಸರಿ. ಗಲಾಟೆ ನಡೆದ ಸಮಯದಲ್ಲಿ 6 ನೇ ಆರೋಪಿ ಶಾಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು ಎಂದರೆ ಸರಿಯಲ್ಲ. 6 ನೇ ಆರೋಪಿ ಸರ್ಕಾರಿ ನೌಕರಿಯಲ್ಲಿ ಇರುವ

ಕಾರಣ ಅವರ ವಿರುದ್ಧ ದೂರನ್ನು ನೀಡಿದ್ದಲ್ಲಿ, ನಮ್ಮ ಪ್ರಕರಣಕ್ಕೆ ಮಾನ್ಯತೆ ಬರುತ್ತದೆ ಎಂದು ಗಲಾಟೆ ಸಂಜೆ 5 ರಿಂದ 6 ರವರೆಗೆ ಆಗಿದೆ ಎಂದು 6 ನೇ ಆರೋಪಿತರನ್ನು ಸೇರಿಸಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಮು.ಮಾ.1 ರಂತಹ ಎಡೆಮಟ್ಟೆಗಳು ಸದರಿ ಸ್ಥಳದಲ್ಲಿ ಸಿಗುತ್ತವೆ ಎಂದರೆ ಸರಿಯಲ್ಲ. 3 ನೇ ಆರೋಪಿ ಮು.ಮಾ.1 ರಿಂದ ನನ್ನ ಮೇಲೆ ಹಲ್ಲೆ ಮಾಡಿಲ್ಲ ಎಂದರೆ ಸರಿಯಲ್ಲ. ಇತರೆ ಆರೋಪಿತರು ನನಗೆ ಮತ್ತು ಚಾಸಾ.4 ರವರಿಗೆ ಕೈ ಮತ್ತು ಕಾಲುಗಳಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ.

8. ಆರೋಪಿತರು ನನ್ನ ಮುಖಕ್ಕೆ ಮತ್ತು ಕೈಗಳಿಗೆ ಗಾಯ ಮಾಡಿದ್ದರು. ಆಸ್ಪತ್ರೆಯಲ್ಲಿ ಆ ಬಗ್ಗೆ ನಾನು ವೈದ್ಯರಿಗೆ ಹೇಳಿರುತ್ತೇನೆ. ಮುಖದಲ್ಲಿ ತರಚಿದ ಗಾಯಗಳಾಗಿದ್ದು, ರಕ್ತ ಬಂದಿತ್ತು. ನನ್ನ ಬಟ್ಟೆ ರಕ್ತಸಿಕ್ತ ಆಗಿರಲಿಲ್ಲ. ನನಗೆ ತರಚಿದ ಗಾಯ ಆಗಿರಲಿಲ್ಲ ಎಂದರೆ ಸರಿಯಲ್ಲ. ನಾವು ಆಸ್ಪತ್ರೆಗೆ ರಾತ್ರಿ 9 ಗಂಟೆಗೆ ಹೋಗಿರುತ್ತೇವೆ. ಆಸ್ಪತ್ರೆಗೆ ನಾನು ಮತ್ತು ಚಾಸಾ.4 ರವರು ಹೋಗಿದ್ದೆವು. ನಮಗೆ ಪರೀಕ್ಷಿಸಿದ ವೈದ್ಯರ ಹೆಸರು ಗೊತ್ತಿಲ್ಲ. ಪೊಲೀಸರು ರಾತ್ರಿ 11 ರಿಂದ 12 ಗಂಟೆಯ ಸಮಯದಲ್ಲಿ ಬಂದು ನಮ್ಮ ಹೇಳಿಕೆಯ ದೂರನ್ನು ಪಡೆದುಕೊಂಡಿರುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಕೋರಿದ್ದು, ಮನವಿಯನ್ನು ತಿರಸ್ಕರಿಸಿ ಮುಂದುವರೆದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿಯಿದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಹೊಳಲ್ಕೆರೆ